ಪ್ರಸ್ತಾವದ ಅಂಗೀಕಾರ

ಕುಮಾರಿ ಶೋಭಾ ಕರಂದ್ಲಾಜೆ (ಮಾನ್ಯ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, ೨೦೧೨ ನೇ ಸಾಲಿನ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

೨೦೧೨ ನೇ ಸಾಲಿನ ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ವಿಧೇಯಕವನ್ನು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ತಿದ್ದುಪಡಿಯೊಂದಿಗೆ ಅನುಮೋದನೆ ದೊರಕಿತು.

ಅಧ್ಯಕ್ಷರು : ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ವಿಧೇಯಕ, ೨೦೧೨

ಶ್ರೀ ಬಿ.ಜಿ.ಜಯಚಂದ್ರ : ಇದನ್ನು ನಾನು ನೋಡಿದ್ದೇನೆ. ಅದು very dangerous Act ಎಂದು ಕಂಡುಬರುತ್ತಿದೆ. ನಾಳೆ ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡೋಣ.

ಅಧ್ಯಕ್ಷರು : ಕರ್ನಾಟಕ ರಾಜ್ಯ ಸಹಾಯಿ ಕರ್ಮಚಾರಿಗಳ ಆಯೋಗ ವಿಧೇಯಕ , ೨೦೧೨

ಶ್ರೀ ಟಿ.ಬಿ.ಜಯಚಂದ್ರ : ನಾವು ಸರಿಯಾಗಿ ನೋಡಿಲ್ಲ. ನಾಳೆ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ.

ಶ್ರೀ ಸಿದ್ಧರಾಮಯ್ಯ : ನಾಳೆ ತೆಗೆದುಕೊಳ್ಳೋಣ. ಮೂರು ಬಿಲ್-ಗಳನ್ನು ಮಾಡಲಿಕ್ಕೆ ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) : ಇದು ಎರಡು ಬೋರ್ಡ್‌ಗಳಿಗೆ Authority constitute ಮಾಡುವುದಷ್ಟೆ. ಬೇರೆ ಏನೂ ಇಲ್ಲ. ನರ್ಸಿಂಗ್ ಅಥಾರಿಟಿ ಅಷ್ಟೇ.

ಶ್ರೀ ಟಿ.ಬಿ.ಜಯಚಂದ್ರ : ದೇಶದಲ್ಲಿ ಎಲ್ಲಿಯೂ ಇಲ್ಲದಿರುವಂಥ ಕಾನೂನನ್ನು ತರುತ್ತಿದ್ದೀರಿ ಅಷ್ಟೆ.

ಶ್ರೀ ಎಸ್.ಎ.ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) : ನರ್ಸಿಂಗ್ ಬೋರ್ಡ್ ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್ ಇವೆ, ಅವೆರಡಕ್ಕೂ ಒಂದು Authority ಮಾಡುವುದಷ್ಟೆ, ಬೇರೇನೂ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ : ನಾನು ನೋಡಿದೆ.ಎಲ್ಲಿಯಾದರೂ ಬೋರ್ಡ್‌ಗಳಿಗೆ ಮಂತ್ರಿಗಳು ಅಧ್ಯಕ್ಷರಾಗುವುದು ಉಂಟೆ?

ಶ್ರೀ ಎಸ್.ಎ.ರಾಮದಾಸ್ : Authority. ಈಗಲೂ ಬೋರ್ಡ್ ಇದೆ, ಎಕ್ಸಾಮ್ ಬೋರ್ಡ್ ಇದೆ.

ಶ್ರೀ ಟಿ.ಬಿ.ಜಯಚಂದ್ರ : Authorityಗೆ ಯಾರು ಅಧ್ಯಕ್ಷರಾಗಬೇಕು? I don't agree with you.

ಶ್ರೀ ಎಸ್.ಎ.ರಾಮದಾಸ್(ವೈದ್ಯಕೀಯ ಶಿಕ್ಷಣ ಸಚಿವರು) : ಈಗಲೂ ಅದೇ ಪದ್ಧತಿ ಇದೆ.

ಶ್ರೀ ಸಿದ್ಧರಾಮಯ್ಯ : ಇದು ಯಾವ ರಾಜ್ಯದಲ್ಲಿದೆ?

ಶ್ರೀ ಟಿ.ಬಿ.ಜಯಚಂದ್ರ : ಯಾವ ರಾಜ್ಯದಲ್ಲಿದೆ ತರಲಿ. ನನಗೇನಿಲ್ಲ ಚರ್ಚೆ ಮಾಡುವುದಾದರೆ ರಾತ್ರಿ ೮.೦೦ ಗಂಟೆಯಾಗಲಿ ನಾವು ಕುಳಿತುಕೊಳ್ಳುತ್ತೇವೆ. ಎಲ್ಲಿಯಾದರೂ ಮಂತ್ರಿಗಳನ್ನು ಬೋರ್ಡ್‌ಗೆ ಅಧ್ಯಕ್ಷರನ್ನಾಗಿ ಮಾಡುವುದು ಉಂಟೆ?

ಶ್ರೀ ಸಿದ್ದರಾಮಯ್ಯ : ಈಗ ನಾಳೆ ಚರ್ಚೆ ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ : ಸೆಕ್ರೆಟರಿ ಮೆಂಬರ್, ಮಂತ್ರಿ ಅಧ್ಯಕ್ಷರು. ಇನ್ನೊಂದು constitute ಮಾಡಿದ್ದಾರೆ. ಇದು ಸರಿಯೇ ಈ ಬಗ್ಗೆ ನಾಳೆ ಚರ್ಚೆ ಮಾಡೋಣ ಅಧ್ಯಕ್ಷರೆ.

ಶ್ರೀ ಬಿ.ಸುರೇಶ್‌ಗೌಡ (ತುಮಕೂರು) : ನಾವು ಆಡಳಿತ ಪಕ್ಷದವರು ಸಹ ಈ ಬಿಲ್ ಅನ್ನು ವಿರೋಧ ಮಾಡುತ್ತೇವೆ. ಈ ಬಿಲ್ ಸರಿಯಿಲ್ಲ. ದಯವಿಟ್ಟು ಇದನ್ನು ವಾಪಸ್ ಪಡೆಯಬೇಕು. ಈ ಬಿಲ್‌ಗೆ ತಿದ್ದುಪಡಿ ತರಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ಬಿಲ್ ನಾಳೆ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ.ಜಯಚಂದ್ರ : ಅಧ್ಯಕ್ಷರೆ, ಹರಿಬಿರಿ ಯಲ್ಲಿ ಬಿಲ್ ತರುವುದು ಬೇಡ. ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

13. ಗಮನ ಸೆಳೆಯುವ ಸೂಚನೆಗಳು

ವಿಷಯ: ಶ್ರೀ ಸಿದ್ದರಾಮಯ್ಯ ಅವರು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿಗಳ ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಹಣ ಸಂದಾಯ ಮಾಡದಿರುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ವರುಣ) : ಮಾನ್ಯ ಅಧ್ಯಕ್ಷರೆ, ಚಳ್ಳಕೆರೆ ತಾಲ್ಲೂಕಿನಲ್ಲಿ NREGS ನಲ್ಲಿ ಕೆಲಸ ನಡೆದಿದೆ. ೨೦೦೯-೧೦ ರವರೆಗೆ ಅಲ್ಲಿ ಕೆಲಸ ನಡೆದಿರುವುದಕ್ಕೆ ಕೂಲಿ ಕೊಟ್ಟಿಲ್ಲ. ಈ ಬಗ್ಗೆ ಗ್ರಾಮೀಣ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ,